question will be examined after the estimate is received.

ಶ್ರೀ ಎಸ್. ಕರಿಯಪ್ಪ.—ಈ ದೇವಸ್ಥಾನದ ಬಗ್ಗೆ ಕೈಗೊಳ್ಳಬೇಕಾಗಿರತಕ್ಕಂಥ ಕೆಲವು ಕಾರ್ಯಕ್ರಮಗಳ ಬಗ್ಗೆ ಆ ದೇವಸ್ಥಾನದ ಧರ್ಮದರ್ಶಿಗಳು ತೀರ್ಮಾನ ಮಾಡಿ ಕಳುಹಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Mr. SPEAKER.—Government have not admitted that it is a historical and important place.

ಶ್ರೀ ಎಸ್. ಕರಿಯಪ್ಪ.—ಈ ಕಬ್ಬಾಳದ ಬೆಟ್ಟ ಒಂದು ಚರಿತ್ರಾರ್ಹವಾದ ಸ್ಥಳವಾಗಿದೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದೇನೋ ನಾನು ಅಲ್ಲಿಗೆ ಹೋಗಿನೋಡಿಲ್ಲ.

ಶ್ರೀ ಎಸ್. ಕರಿಯಪ್ಪ.—ಹಾಗಾದರೆ ಇಂಥ ಚರಿತ್ರಾರ್ಹವಾದ ಸ್ಥಳಗಳಿಗೆ ಅನುಕೂಲಗಳನ್ನು ಕಲ್ಪಿಸುವುದು ಸರ್ಕಾರದವರಿಗೆ ಆವಶ್ಯಕವೆಂದು ಕಂಡು ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಮೈಸೂರು ಸಂಸ್ಥಾನದಲ್ಲಿ ಇಂಥ ಚರಿತ್ರಾರ್ಹವಾದ ಸ್ಥಳಗಳು ಅನೇಕವಾಗಿರುತ್ತವೆ. ಅವುಗಳಿಗೆಲ್ಲಾ ಒಂದೇ ಸಲಕ್ಕೆ ಗಮನಕೊಡಲು ಹಣದ ಅನುಕೂಲತೆ ಇರುವುದಿಲ್ಲ.

Bennikall Tank (Restoration).

Q.—706. Sri KOTRA BASAVANA GOUD (Kudligi).—

Will the Government be pleased to state :—

(*a*) whether they will undertake to restore the breached tank of Bennikall in Kudligi firka of Bellary District;

(*b*) the area it would irrigate ?

A.—Sri Kadidal MANJAPPA (Minister for Revenue and Public Works).—

(*a*) and (*b*) This has to be investigated.

ಶ್ರೀ ಕೊಟ್ರ ಬಸವನಗೌಡ.—ಈ ಕೆರೆಯನ್ನು ಜೀರ್ಣೋದ್ಧಾರ ಮಾಡತಕ್ಕ ಬಗ್ಗೆ ಈ ಹಿಂದೆ ಮದ್ರಾಸ್ ಸರ್ಕಾರದವರು ಒಂದು ಅಂದಾಜು ತಯಾರಿಸಿದ್ದರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕೊಟ್ರ ಬಸವನಗೌಡ.—ಈ ಕೆರೆಯನ್ನು ಜೀರ್ಣೋದ್ಧಾರ ಮಾಡಿಕೊಡಬೇಕೆಂದು ಇಲ್ಲಿಗೆ 20 ವರ್ಷಗಳಿಂದಲೂ ಅಲ್ಲಯ ಜನರು agitate ಮಾಡುತ್ತಿದ್ದಾರೆ ಅನ್ನುವುದೂ ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಪ್ರಶ್ನೆಯನ್ನೆಲ್ಲಾ ನಾನು ಪುನಃ ಪರಿಶೀಲನೆಮಾಡಬೇಕಾಗಿದೆ. ಆದ್ದರಿಂದ ಈಗಲೇ ನಾನೇನೂ ಉತ್ತರ ಕೊಡಲಾರೆ.

Land Release from Date Grove area in Chikmagalur District.

Q.—763. Sri G. PUTTASWAMY (Chikmagalur-Mudigere—Scheduled Castes).—

Will the Government be pleased to state :—

(*a*) whether there are any representations from landless people to release more lands out of date grove area in Chikmagalur District;

(*b*) if so, the number of darkhasts pending in this behalf in Chikmagalur District ?

A.—Sri Kadidal MANJAPPA (Minister for Revenue and Public Works).—

(*a*) Yes. In Kadur Taluk, applications are being received for grant of lands out of date groves.

(*b*) Fifty darkhasts in Kadur Taluk, and one darkhast in Chikmagalur Taluk, received from landless and other persons are pending disposal. Information separately regarding applications received from landless and other persons is not readily available.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಈ ಅರ್ಜಿಹಾಕಿರತಕ್ಕವರ ಹೆಸ್ರಿಕೆ ಎಷ್ಟು ಜನರು ಜಮೀನಿಲ್ಲದವರು ಇದ್ದಾರೆ ಎನ್ನುವುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳೆಲ್ಲಾ ಈಗ ನನ್ನಲ್ಲಿರುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಅರ್ಜಿಗಳೆಲ್ಲಾ ಇತ್ಯರ್ಥವಾಗದೆ ಎಷ್ಟು ದಿವಸಗಳಿಂದ ಹೀಗೇ ಮುಲ್ಕಿನಿಂತಿರುತ್ತವೆ ?

ಶ್ರೀ ಕಡಿದಾಳ್ ಮಂಜಪ್ಪ.—6-8 ತಿಂಗಳಿಂದ ಹಾಗೆ ನಿಂತಿರಬಹುದು.

ಶ್ರೀ ಜಿ. ಪುಟ್ಟಸ್ವಾಮಿ.—ಈ ಜಮೀನುಗಳನ್ನು ಆ ಅರ್ಜಿದಾರರಿಗೆ ಇನ್ನೆಷ್ಟು ದಿವಸಗಳಲ್ಲಿ release ಮಾಡಬೇಕೆಂದು ಹೇಳಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಭಾಗಧಲ್ಲಾಗಲೇ ಜಮೀನನ್ನು release ಮಾಡಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಎಲ್ಲಿ ಮರಗಳಿಲ್ಲವೋ ಅಂಥ ಜಾಗದಲ್ಲಿ ಮತ್ತು ಎಲ್ಲಿ ಸಾಗುವಳಿಗೆ ಅವಕಾಶ ಮತ್ತು ಜಮೀನು ಲಾಯಕ್ಕಾಗಿಲ್ಲವೋ ಅಂಥ ಸ್ಥಳದಲ್ಲಿ ಮಾತ್ರ release ಮಾಡಿ ಬಾಕಿ ಕಡೆ ಹಾಗೆ ನಿಲ್ಲಿಸಿಕೊಂಡಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲೆಲ್ಲಿ ಮರಗಳು ಜಾಸ್ತಿಯಾಗಿರುತ್ತವೆಯೋ ಅಲ್ಲಿ ಮಾತ್ರ ಈ ಜಮೀನನ್ನು ಇನ್ನೂ release ಮಾಡಿಲ್ಲ ಅಷ್ಟೆ.

ಶ್ರೀ ಜಿ. ಪುಟ್ಟಸ್ವಾಮಿ.—ಮರಗಳು ಇಲ್ಲದೆ ಇರತಕ್ಕ ಕಡೆ ಕೂಡ ಜಮೀನನ್ನು release ಮಾಡದೆ ಇರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ? ಹೀಗೆ ಮಾಡಲು ತಮ್ಮ ಉದ್ದೇಶವೇನು ?